# ಕರ್ನಾಟಕ ಸರ್ಕಾರಿ ವಿಮಾ ಇಲಾಖೆ

ಸಂಖ್ಯೆ. ಎಫ್‌ಡಿ 45 ಐಎನ್‌ಎಸ್ 57, ಬೆಂಗಳೂರು

ದಿನಾಂಕ 14ನೇ ಸೆಪ್ಟೆಂಬರ್ 1958.

**ನಿಯಮಗಳು**

ಭಾರತ ಸಂವಿಧಾನದ 309ನೇ ಅನುಚ್ಛೇದಕ್ಕೆ ಅನುಸಾರವಾಗಿ ಕರ್ನಾಟಕ ರಾಜ್ಯಪಾಲರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಇರುವ ಕಡ್ಡಾಯ ಜೀವ ವಿಮಾ ಯೋಜನೆಗೆ ಸಂಬಂಧಿಸಿದಂತೆ ಈಗಿರುವ ನಿಯಮಗಳನ್ನು ರದ್ದುಗೊಳಿಸಿ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದ್ದಾರೆ.

(1) ಪ್ರಸ್ತಾವನೆದಾರನ/ ಪ್ರಸ್ತಾವನೆದಾರಳ ಹಿಂದಿನ ಜನನ ದಿನಾಂಕ ಅಥವಾ ಮುಂದಿನ ಜನನ ದಿನಾಂಕ ಇವೆರಡರಲ್ಲಿ ಯಾವುದು ಪ್ರಸ್ತಾವನೆ ಅಂಗೀಕರಿಸಿದ ದಿನಾಂಕಕ್ಕೆ ಸಮೀಪವೋ, ಆ ದಿನಾಂಕವನ್ನು ಪ್ರಸ್ತಾವನೆದಾರನ/ಳ ವಯಸ್ಸೆಂದು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಅವು ಸಮಾನ ದೂರದಲ್ಲಿದ್ದರೆ, ಅವನ/ ಅವಳ ಹಿಂದಿನ ಜನನ ದಿನಾಂಕದಂದು ವಯಸ್ಸನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು

(2) 39ನೇ ನಿಯಮದ ಉಪ ಬಂದಗಳಿಗೆ ಒಳಪಟ್ಟು, ಈ ನಿಯಮಗಳ ಮೇರೆಗಿನ ವಿಮೆಯು ಒಬ್ಬ ಪ್ರೊಬೆಷನರನ್ನು ಒಳಗೊಂಡಂತೆ ಅವನು/ ಅವಳು ಸೇವೆಗೆ ಸೇರಿದ ದಿನಾಂಕದಿಂದ ಪ್ರತಿಯೊಬ್ಬ ಸರ್ಕಾರಿ ನೌಕರನಿಗೆ/ ನೌಕರಳಿಗೆ ಕಡ್ಡಾಯವಾಗಿರತಕ್ಕದ್ದು. ಪರಂತು, ಈ ನಿಯಮದಲ್ಲಿನ ಯಾವುದೂ ಐವತ್ತು ವರ್ಷಗಳನ್ನು ಮೀರಿದ ಸರ್ಕಾರಿ ನೌಕರನಿಗೆ ಅನ್ವಯಿಸತಕ್ಕದ್ದಲ್ಲ

(3) ಪ್ರತಿಯೊಬ್ಬ ಸರ್ಕಾರಿ ನೌಕರನು/ಳು, ಅವನು/ಅವಳು ಸೇವೆಗೆ ಸೇರಿದ ತರುವಾಯ ಅವನ/ ಅವಳ ಮೊದಲ ತಿಂಗಳ ಸಂಬಳವನ್ನು ಅವನು/ಅವಳು ಪಡೆಯುವ ಮೊದಲು ಸಂದರ್ಭಾನುಸಾರ ವೈದ್ಯಕೀಯ ಅಥವಾ ವೈದ್ಯಕೀಯೇತರ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಪ್ರಥಮ ವಿಮಾ ಕಂತನ್ನು ಸಂದಾಯ ಮಾಡತಕ್ಕದ್ದು ಮತ್ತು ನಿಯಮಗಳ ಪ್ರಕಾರ ಅವಶ್ಯವಿದ್ದಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳತಕ್ಕದ್ದು.

(4) ಒಬ್ಬ ಸರ್ಕಾರಿ ನೌಕರನು/ಳು ತಾನು ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿಗೆ ಗೊತ್ತುಪಡಿಸಿರುವ ಕನಿಷ್ಠ ವಿಮಾ ಕಂತಿಗಿಂತ ಹೆಚ್ಚಿನ ವಿಮಾ ಕಂತಿಗೆ ವಿಮೆ ಮಾಡಿಸಲು ಅಪೇಕ್ಷಿಸಿದರೆ ಆತನು/ಆಕೆ ಹಾಗೆ ಮಾಡಬಹುದು.

## ವಿಮೆ ಮಾಡಿಸುವ ಕಾರ್ಯವಿಧಾನ

ಪ್ರಸ್ತಾವನೆದಾರನು/ಳು 15ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗನ್ನು ಇರಸಾಲು ಮಾಡಿರುವುದರ ಗುರುತಾಗಿ, ಖಜಾನೆ/ಬ್ಯಾಂಕಿನ ರಸೀದಿಯೊಂದಿಗೆ ಅವನ/ಅವಳ ಪ್ರಸ್ತಾವನೆಯನ್ನು ಅವನ/ಅವಳ ನಿಕಟ ಸರ್ಕಾರಿ ವರಿಷ್ಠರಿಗೆ ಸಲ್ಲಿಸತಕ್ಕದ್ದು. ಅನಕ್ಷರಸ್ಥ ವ್ಯಕ್ತಿಗಳ ಸಂದರ್ಭದಲ್ಲಿ ಈ ಪರವಾಗಿ ಅವನಿಂದ/ಅವಳಿಂದ ಸೂಕ್ತವಾಗಿ ಪ್ರಾಧಿಕೃತಗೊಂಡ ಸರ್ಕಾರಿ ವರಿಷ್ಠ ಅಥವಾ ಯಾವನೇ/ಳೆ ಅಧಿಕಾರಿಯು ನಮೂನೆಯನ್ನು ಭರ್ತಿಮಾಡತಕ್ಕದ್ದು.

ನಿಕಟ ಸರ್ಕಾರಿ ವರಿಷ್ಠನು/ಳು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಗಳನ್ನು ಹೊಂದಿರುವ ವೈದ್ಯಕೀಯ ಅಧಿಕಾರಿಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡತಕ್ಕದ್ದು ಮತ್ತು ತಾನು ಹಾಗೆ ಮಾಡಿರುವ ಬಗ್ಗೆ ಪ್ರಸ್ತಾವನೆದಾರರಿಗೆ ತಿಳಿಸತಕ್ಕದ್ದು. 27-ಅ ನಿಯಮದ ಮೇರೆಗಿನ ವೈದ್ಯಕೀಯೇತರ ವಿಮೆಯ ಸಂದರ್ಭದಲ್ಲಿ ಅದನ್ನು ಜಿಲ್ಲೆಯ ಜಿಲ್ಲಾ ವಿಮಾಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

## ಅಂಗೀಕಾರದ ನೋಟೀಸು ಹಾಗೂ ಮೊದಲ ವಿಮಾ ಕಂತಿನ ರಸೀದಿ

ಪ್ರಸ್ತಾವನೆದಾರರು ಮೊದಲನೆಯ ವಿಮೆಯ ಸಂದರ್ಭದಲ್ಲಿ ನಿಯಮ 8ರ ಮೇರೆಗಿನ ಕೋಷ್ಟಕದ ಪ್ರಕಾರ ಕನಿಷ್ಠ ಮೊಬಲಗಿಗೆ ಸಮನಾದ ಮೊಬಲಗನ್ನು ಮತ್ತು ತರುವಾಯದ ವಿಮೆಯ ಸಂದರ್ಭದಲ್ಲಿ ಮೊಬಲಗಿನ ವ್ಯತ್ಯಾಸವನ್ನು ಸರ್ಕಾರಿ ಖಜಾನೆ/ ಬ್ಯಾಂಕಿಗೆ ಇರಸಾಲು ಮಾಡತಕ್ಕದ್ದು ಮತ್ತು ಖಜಾನೆ /ಬ್ಯಾಂಕಿನ ರಸೀದಿಯನ್ನು ಲಗತ್ತಿಸಿ ವಿಮಾ ಪ್ರಸ್ತಾವನೆಯನ್ನು ಸಲ್ಲಿಸಿದ ಮಾತ್ರಕ್ಕೆ ಹಾನಿ ಪರಿಹಾರ ನೀಡಿಕೆಯನ್ನು ವಹಿಸಿಕೊಳ್ಳಲಾಗುವುದಿಲ್ಲ. ನಿರ್ದೇಶಕರು ವಿಮಾ ಪ್ರಸ್ತಾವನೆಯನ್ನು ಅಂಗೀಕರಿಸಿದಲ್ಲಿ ಹಾನಿ ಪರಿಹಾರ ನೀಡಿಕೆಯನ್ನು ವಹಿಸಿಕೊಳ್ಳಲಾಗುವುದು ಮತ್ತು ಖಜಾನೆ/ ಬ್ಯಾಂಕಿನಲ್ಲಿ ಹಾಗೆ ಠೇವಣಿ ಮಾಡಲಾದ ಮೊಬಲಗನ್ನು ಮೊದಲ ವಿಮಾ ಕಂತಿನ ಲೆಕ್ಕಕ್ಕೆ ಸರಿಹೊಂದಿಸಲಾಗುವುದು.

## ತರುವಾಯದ ವಿಮಾ ಕಂತುಗಳ ಸಂದಾಯ

ತರುವಾಯದ ವಿಮಾಕಂತನ್ನು ಮುಂಚಿತವಾಗಿ ಸಂದಾಯ ಮಾಡತಕ್ಕದ್ದು ಮತ್ತು ವಿಮಾದಾರರ ವೇತನದಿಂದ ಮುರಿದುಕೊಳ್ಳುವ ಮೂಲಕ ಮಾಸಿಕ ವಸೂಲಿ ಮಾಡತಕ್ಕದ್ದು. ಆದರೆ ವಿಮಾದಾರನು/ ಳು ಭತ್ಯೆ ಸಹಿತವಾದ ರಜೆಯ ಮೇಲೆ ಕೆಲಸಕ್ಕೆ ಹಾಜರಾಗದಿದ್ದರೆ ಅಥವಾ ಮುಂದಿನ ಸಂದಾಯಕ್ಕಾಗಿ ಅವನ/ ಅವಳ ಸಂಬಳವನ್ನು ತಡೆಹಿಡಿಯಲಾಗಿದ್ದಲ್ಲಿ, ರಜೆ ಭತ್ಯೆ ಮತ್ತು ಸಂಬಳವನ್ನು ಪಡೆದಾಗ ವಿಮಾ ಕಂತುಗಳನ್ನು ವಸೂಲಿ ಮಾಡತಕ್ಕದ್ದು. ಆದರೆ ಅವನು/ ಅವಳು ಭತ್ಯೆ ರಹಿತ ರಜೆಯನ್ನು ಪಡೆದಲ್ಲಿ ಅಥವಾ ಅವನನ್ನು/ ಅವಳನ್ನು ಸೇವೆಯಿಂದ ಅಮಾನತ್ತುಗೊಳಿಸಲಾದಲ್ಲಿ ಅಥವಾ ವಿಮಾ ಕಂತನ್ನು ವಸೂಲಿ ಮಾಡಲಾಗದ ಅಥವಾ ಸಂದಾಯ ಮಾಡಲಾಗದ ಯಾವುದೇ ಇತರ ಸಂದರ್ಭದಲ್ಲಿ ಅದನ್ನು ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡದಿದ್ದಲ್ಲಿ, ಆ ಹಣವು ಅವನ/ ಅವಳ ಪಾಲಿಸಿಯ ಮೇಲೆ ವರ್ಷಕ್ಕೆ ಶೇಕಡಾ ಒಂಭತ್ತು ದರದಲ್ಲಿ ಸರಳ ಬಡ್ಡಿಯನ್ನು ಹೊಂದಿರುವ ಸಾಲವಾಗಿರತಕ್ಕದ್ದು ಮತ್ತು ಮುಂದಿನ ಸಂದಾಯಗಳು ಯಾವುದಾದರೂ ಇದ್ದಲ್ಲಿ, ಆ ಸಂದಾಯ ಹಣದ ಶೇಕಡಾ ಐದಕ್ಕಿಂತ ಕಡಿಮೆಯಿಲ್ಲದ ಕಂತುಗಳಲ್ಲಿ ಬಾಕಿಯಂತೆ ವಸೂಲಿ ಮಾಡತಕ್ಕದ್ದು.

## ಸೇವೆಯ ಸಮಾಪ್ತಿ (ವಿಮಾದಾರರಿಗೆ ಆಯ್ಕೆಯ ಅವಕಾಶ)

ವಿಮಾದಾರರು ಈ ನಿಯಮಗಳ ಮೇರೆಗೆ ಐವತ್ತೈದು ವರ್ಷ ವಯಸ್ಸು ಪೂರ್ಣಗೊಳ್ಳುವ ಮೊದಲು ಸರ್ಕಾರಿ ಸೇವೆಯಲ್ಲಿರುವುದು ನಿಂತುಹೋದರೆ, ಹಾಗೆ ಸಮಾಪ್ತವಾದ, ಹನ್ನೆರಡು ತಿಂಗಳೊಳಗೆ ಅಥವಾ ಅವನ/ಅವಳ ಸೇವೆಗಳನ್ನು ಕೊನೆಗೊಳಿಸಿದ ಸಕ್ಷಮ ಪ್ರಾಧಿಕಾರಿಯ ಆದೇಶದ ದಿನಾಂಕ ಇವೆರಡರಲ್ಲಿ ಯಾವುದು ನಂತರವೋ ಆ ಸಂದರ್ಭದಲ್ಲಿ ಅವನು/ಅವಳು ಈ ಮುಂದಿನ ಮಾರ್ಗಕ್ರಮಗಳಲ್ಲಿ ಯಾವುದಾದದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು:-

i. ಅವನಿಗೆ/ಅವಳಿಗೆ ಐವತ್ತೈದು ವರ್ಷ ವಯಸ್ಸಾದಾಗ ಅವಧಿ ಪೂರ್ಣಗೊಳ್ಳುವವರೆಗೆ ಅವನ/ಅವಳ ಪಾಲಿಸಿ ಅಥವಾ ಪಾಲಿಸಿಗಳಿಗೆ ಬಾಕಿಯಿರುವ ವಿಮಾ ಕಂತುಗಳನ್ನು ಸಂದಾಯ ಮಾಡುವುದನ್ನು ಮುಂದುವರೆಸಬಹುದು.

ii. ಈ ನಿಯಮಗಳ ಮೇರೆಗೆ ನೀಡಬಹುದಾದ ಸಂದಾಯವಾದ ಪಾಲಿಸಿಯ (ಪೈಡ್ ಅಪ್ ಪಾಲಿಸಿ) ಕನಿಷ್ಠ ಮೊಬಲಗು 50-00 ರೂಪಾಯಿಗಳಾಗಿರತಕ್ಕದ್ದು ಎಂಬ ಷರತ್ತಿಗೊಳಪಟ್ಟು, ವಿಮಾದಾರರು ಐವತ್ತೈದು ವರ್ಷ ತುಂಬುವವರೆಗೆ ಮೂಲ

ಪಾಲಿಸಿಯ ಮುಂದುವರೆಯುತ್ತಿದ್ದರೆ ಸಂದಾಯವಾಗುತ್ತಿದ್ದ ಒಟ್ಟು ವಿಮಾ ಕಂತಿಗೆ, ಪಾಲಿಸಿಯ ಮೇರೆಗೆ ಸಂದಾಯ ಮಾಡಲಾದ ಒಟ್ಟು ವಿಮಾ ಕಂತಿನ ಪ್ರಮಾಣವಷ್ಟೋ, ಮೂಲ ವಿಮಾ ಮೊಬಲಗಿಗೆ ಅದೇ ಪ್ರಮಾಣವನ್ನು ಹೊಂದಿರುವ ಇಳಿಸಲಾದ ವಿಮಾ ಮೊತ್ತಕ್ಕಾಗಿ ಸಂದಾಯವಾದ ವಿಮಾ ಪಾಲಿಸಿಯನ್ನು ಅವನು/ಅವಳು ತೆಗೆದುಕೊಳ್ಳಬಹುದು.

iii. ಅವನು/ಅವಳು ಈ ನಿಯಮಗಳಿಗೆ ಲಗತ್ತಿಸಲಾದ ಸೂಕ್ತ ಕೋಷ್ಟಕಕ್ಕೆ ಅನುಸಾರವಾಗಿ ಪಾಲಿಸಿಯ ಮೌಲ್ಯವನ್ನು ಬಿಟ್ಟುಕೊಟ್ಟು ನಗದನ್ನು ಪಡೆದುಕೊಳ್ಳಬಹುದು.

ಪರಂತು, ವಿಮಾದಾರರು, ಅವನ/ಅವಳ ಪಾಲಿಸಿಯ ಬಗ್ಗೆ ಮೇಲ್ಕಂಡಂತೆ ವ್ಯವಹರಿಸಲು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ, ಅವನು/ಅವಳು ಮೇಲೆ ಸೂಚಿಸಲಾದ ಮೂರನೇ ಪರ್ಯಾಯ ವ್ಯವಸ್ಥೆಗೆ ಹಕ್ಕುಳ್ಳವನಾಗಿರುತ್ತಾನೆ/ಳೆ ಮತ್ತು 25ನೇ ನಿಯಮದಲ್ಲಿ ವಿವರಿಸಲಾದಂತೆ ಅಧ್ಯರ್ಪಣೆ ಮೌಲ್ಯವನ್ನು ಅವನಿಗೆ/ಅವಳಿಗೆ ಅಥವಾ ಅವನ/ಅವಳ ನಾಮ ನಿರ್ದೇಶಿತನಿಗೆ ಅಥವಾ ಅವನ/ಅವಳ ನಾಮ ನಿರ್ದೇಶಿತರಿಗೆ ಮಾತ್ರ ಸಂದಾಯ ಮಾಡಲಾಗುವುದು. ನಾಮ ನಿರ್ದೇಶಿತರು ಯಾರೂ ಇಲ್ಲದಿದ್ದರೆ, ಸದರಿ ಮೊಬಲಗನ್ನು ಸ್ವೀಕರಿಸಲು ಸಕ್ಷಮ ನ್ಯಾಯಾಲಯದಿಂದ ಪಡೆದ ಅಧಿಕಾರ ಪತ್ರವನ್ನು ಹಾಜರುಪಡಿಸುವ ಅವನ/ಅವಳ ವಾರಸುದಾರರಿಗೆ ಸಂದಾಯ ಮಾಡಲಾಗುವುದು.

## ಕ್ಲೇಮುಗಳ ಇತ್ಯರ್ಥ

(ಅ) 28ನೇ ನಿಯಮದ ಮೇರೆಗೆ ಪಡೆಯಲಾದ ಅದರ ಪ್ರತಿಯ ಪಾಲಿಸಿಯನ್ನು ಅಧ್ಯರ್ಪಿಸುವುದಕ್ಕೆ ಒಳಪಟ್ಟು, ಸಂದರ್ಭಾನುಸಾರ ವಿಮಾದಾರನಿಗೆ/ಳಿಗೆ ಐವತ್ತೈದು ವರ್ಷ ವಯಸ್ಸು ತುಂಬಿದ ತರುವಾಯ ಪಾಲಿಸಿಯ ವಿಮಾ ಮೊತ್ತವನ್ನು ವಿಮಾದಾರನಿಗೆ/ಳಿಗೆ ಸಂದಾಯ ಮಾಡತಕ್ಕದ್ದು.

(ಆ) ವಿಮಾದಾರನು/ಳು ಮರಣ ಹೊಂದಿದನೆಂದು/ಳೆಂದು ವರದಿಯಾದಲ್ಲಿ, ಪಾಲಿಸಿಯ ವಿಮಾ ಮೊತ್ತವನ್ನು, ನಿರ್ದೇಶಕರು ಅಗತ್ಯಪಡಿಸಿದಂತೆ ಮರಣ ಮತ್ತು ಅದಕ್ಕೆ ಪೂರಕವಾದ ಸಂಗತಿಗಳ ಬಗ್ಗೆ ತೃಪ್ತಿಕರ ಪುರಾವೆಯನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ವಿಮಾದಾರರು ಅವನ/ಅವಳ ಜೀವಿತ ಕಾಲದಲ್ಲಿ ಈ ನಿಯಮಗಳ ಮೇರೆಗೆ ನಾಮ ನಿರ್ದೇಶನಗೊಳಿಸಿದ

ಮತ್ತು ಅಂಥ ನಾಮ ನಿರ್ದೇಶನವನ್ನು ಇಲಾಖೆಯಲ್ಲಿ ನೋಂದಾಯಿಸಿರುವಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡಲಾಗುವುದು.

(ಇ) ಮೇಲೆ ಸೂಚಿಸಲಾದಂತೆ ಅಂಥ ಯಾವ ನಾಮ ನಿರ್ದೇಶನವನ್ನು ಮತ್ತು ನೋಂದಣಿಯನ್ನು ಮಾಡಿಲ್ಲದಿರುವಲ್ಲಿ, ಪಾಲಿಸಿಯ ಮೂಲಕ ಬರುವ ಮೊತ್ತವನ್ನು, ಸಕ್ಷಮ ನ್ಯಾಯಾಲಯವು ಅದನ್ನು ಸ್ವೀಕರಿಸಲು ಹಕ್ಕುಳ್ಳವರೆಂದು ಘೋಷಿಸುವ ವ್ಯಕ್ತಿ ಮತ್ತು ವ್ಯಕ್ತಿಗಳಿಗೆ ನೀಡಲಾಗುವುದು..

**ನಾಮ ನಿರ್ದೇಶನಗಳು**

(i) ವಿಮಾದಾರರು, ಸಂದಾಯಕ್ಕಾಗಿ ಪಾಲಿಸಿಯ ಅವಧಿಯು ಪೂರ್ಣಗೊಳ್ಳುವ ಮೊದಲು ಯಾವುದೇ ಸಮಯದಲ್ಲಿ, ತನ್ನ ರಕ್ತ ಸಂಬಂಧ ಅಥವಾ ವಿವಾಹ ಸಂಬಂಧಿಗಳ ಪೈಕಿ ಅಥವಾ ತನ್ನ ಮೇಲೆ ಅವಲಂಬಿತನಾದ/ಅವಲಂಬಿತರಾದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅವನ/ಅವಳ ಮರಣದ ಸಂದರ್ಭದಲ್ಲಿ ಪಾಲಿಸಿ/ಪಾಲಿಸಿಗಳ ಮೂಲಕ ಭದ್ರತೆ ಪಡೆದ ಹಣವನ್ನು ಸಂದಾಯ ಮಾಡತಕ್ಕುದೆಂದು ನಾಮ ನಿರ್ದೇಶನಗೊಳಿಸಬಹುದು.

ಪರಂತು, ಯಾವನೇ/ ಯಾವಳೇ ನಾಮ ನಿರ್ದೇಶಿತನು/ಳು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ನಾಮ ನಿರ್ದೇಶಿತರ ಅಪ್ರಾಪ್ತ ವಯಸ್ಸಿನ ಅವಧಿಯಲ್ಲಿ ವಿಮಾದಾರನ/ಳ ಮರಣವುಂಟಾದ ಸಂದರ್ಭದಲ್ಲಿ ಪಾಲಿಸಿ/ಪಾಲಿಸಿಗಳ ಮೂಲಕ ಭದ್ರತೆ ಪಡೆದ ಹಣವನ್ನು ಸ್ವೀಕರಿಸುವುದಕ್ಕಾಗಿ ವಿಮಾದಾರನು/ಳು ಯಾವನೇ/ಳೇ ವ್ಯಕ್ತಿಯನ್ನು ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ನೇಮಕ ಮಾಡುವುದು ಕಾನೂನು ಬದ್ಧವಾಗಿರತಕ್ಕದ್ದು.

ಮತ್ತು ಪರಂತು, ಹೆಂಡತಿ ಅಥವಾ ಗಂಡ (ಮಹಿಳಾ ಸರ್ಕಾರಿ ನೌಕರರ ಸಂದರ್ಭದಲ್ಲಿ) ಅಥವಾ ಮಕ್ಕಳನ್ನು ಹೊರತುಪಡಿಸಿದ ಯಾವುದೇ ನಾಮ ನಿರ್ದೇಶನ ಶೂನ್ಯವಾಗತಕ್ಕದ್ದು. ನಾಮ ನಿರ್ದೇಶನದ ತರುವಾಯ ವಿಮಾದಾರನು/ಳು ಮದುವರೆಯಾದರೆ ಮತ್ತು ಪುರುಷ ವಿಮಾದಾರನ ಸಂದರ್ಭದಲ್ಲಿ ಹೆಂಡತಿ ಮತ್ತು/ ಅಥವಾ ಮಕ್ಕಳು ಇದ್ದರೆ ಮತ್ತು ಮಹಿಳಾ ವಿಮಾದಾರನ ಸಂದರ್ಭದಲ್ಲಿ ಗಂಡ ಮತ್ತು/ ಅಥವಾ ಮಕ್ಕಳು ಇದ್ದರೆ ಅಂಥ ನಾಮ ನಿರ್ದೇಶನ ಶೂನ್ಯವಾಗತಕ್ಕದ್ದು ಮತ್ತು ನಾಮ ನಿರ್ದೇಶನವು ಪುರುಷ ವಿಮಾದಾರನ ಸಂದರ್ಭದಲ್ಲಿ

ಹೆಂಡತಿ ಅಥವಾ ಮಕ್ಕಳ ಪರವಾಗಿದೆಯೆಂದು ಮತ್ತು ಮಹಿಳಾ ವಿಮಾದಾರಳ ಸಂದರ್ಭದಲ್ಲಿ ಗಂಡ ಮತ್ತು/ ಅಥವಾ ಮಕ್ಕಳ ಪರವಾಗಿದೆಯೆಂದು ಭಾವಿಸತಕ್ಕದ್ದು.

(ii) ವಿಮಾದಾರನ/ಳ ಜೀವಿತ ಕಾಲದಲ್ಲೇ ಸಂದಾಯಕ್ಕಾಗಿ ಪಾಲಿಸಿಯ ಅವಧಿ ಪೂರ್ಣಗೊಂಡರೆ ಅಥವಾ ನಾಮ ನಿರ್ದೇಶಿತನ/ಳು ಅಥವಾ ಒಬ್ಬನಿಗಿಂತ ಹೆಚ್ಚು ಜನ ನಾಮ ನಿರ್ದೇಶಿತರಿದ್ದು ಎಲ್ಲ ನಾಮ ನಿರ್ದೇಶಿತರು ಸಂದಾಯಕ್ಕಾಗಿ ಪಾಲಿಸಿಯ ಅವಧಿ ಪೂರ್ಣಗೊಳ್ಳುವ ಮೊದಲು ಮೃತಪಟ್ಟರೆ ಪಾಲಿಸಿಯ ಮೂಲಕ ಭದ್ರತೆ ಪಡೆದ ಮೊಬಲಗನ್ನು ವಿಮಾದಾನಿಗೆ/ಳಿಗೆ ಸಂದಾಯ ಮಾಡತಕ್ಕದ್ದು.

(iii) ನಾಮ ನಿರ್ದೇಶಿತನು/ಳು ಅಥವಾ ಒಬ್ಬರಿಗಿಂತ ಹೆಚ್ಚು ಜನ ನಾಮ ನಿರ್ದೇಶಿತರಿದ್ದರೆ ಒಬ್ಬ ನಾಮ ನಿರ್ದೇಶಿತ ಅಥವಾ ನಿರ್ದೇಶಿತರು ವಿಮಾದಾನು/ಳು ಮೃತನಾದ/ಳಾದ ನಂತರ ಬದುಕಿದ್ದರೆ ಪಾಲಿಸಿ ಅಥವಾ ಪಾಲಿಸಿಗಳ ಮೂಲಕ ಭದ್ರತೆ ಪಡೆದ ಮೊಬಲಗನ್ನು ವಿಮಾದಾರನ/ಳ ನಂತರ ಬದುಕಿರುವ ನಾಮ ನಿರ್ದೇಶಿತ ಅಥವಾ ನಾಮ ನಿರ್ದೇಶಿತರಿಗೆ ಸಂದಾಯ ಮಾಡತಕ್ಕದ್ದು.

**ನಕಲು ಪಾಲಿಸಿಗಳು**

(ಅ) ಪಾಲಿಸಿ ಅಥವಾ ಸಂದಾಯವಾದ ಪಾಲಿಸಿಯು ಕಳೆದುಹೋದರೆ ಅಥವಾ ಅದರ ಗುರುತುಹೆಚ್ಚಲು ಕಷ್ಟವಾಗುಷ್ಟು ಹಾನಿಗೊಂಡರೆ, ನಿರ್ದೇಶಕರಿಗೆ ಅರ್ಜಿ ಸಲ್ಲಿಸಿದ ತರುವಾಯ ಅದರ ನಕಲನ್ನು ಪಡೆಯಬಹುದು. ಪರಂತು, ಪಾಲಿಸಿಯು ಕಳೆದುಹೋದ ಬಗ್ಗೆ ಅಥವಾ ಅದರ ವಿರೂಪತೆ ಅಥವಾ ಹಾನಿಯ ಬಗ್ಗೆ ಮತ್ತು ನಕಲನ್ನು ಪಡೆಯುವ ಹಕ್ಕಿನ ಬಗ್ಗೆ ತೃಪ್ತಿಕರ ಪುರಾವೆಯನ್ನು ಒದಗಿಸತಕ್ಕುದು. ನಕಲು ಪಾಲಿಸಿಗಳಿಗಾಗಿ ಅರ್ಜಿಗಳನ್ನು ಸಾಮಾನ್ಯವಾಗಿ ವಿಮಾದಾರನ/ಳ ಸರ್ಕಾರಿ ವರಿಷ್ಠರ ಮೂಲಕ ಸಂದರ್ಭಾನುಸಾರ ನಿರ್ದೇಶಕರು, ವಿಭಾಗೀಯ ಉಪನಿರ್ದೇಶಕರು ಅಥವಾ ಜಿಲ್ಲಾ ವಿಮಾಧಿಕಾರಿಗೆ ಕಳುಹಿಸಿಕೊಡತಕ್ಕುದ್ದು. ನಕಲಿನ ನೀಡಿಕೆಗಾಗಿ 10 ರೂಪಾಯಿಗಳ ಫೀಜನ್ನು ಒದಗಿಸತಕ್ಕುದು.

(ಆ) ವಿಮಾದಾರನಿಗೆ/ಳಿಗೆ ನೀಡಿದ ವಿಮಾ ಕಂತಿನ ರಸೀದಿ ಪುಸ್ತಕವು ಕಳೆದುಹೋದರೆ ಅಥವಾ ಬಳಕೆಗೆ ಅಯೋಗ್ಯವಾದರೆ, ಐದು ರೂಪಾಯಿ ಶುಲ್ಕವನ್ನು ಸಂದಾಯ ಮಾಡಿದ ಈ ಪರವಾಗಿ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಿದ ತರುವಾಯ ಅವನಿಗೆ ಅದರ ನಕಲನ್ನು ನೀಡತಕ್ಕುದು.

## ಪಾಲಿಸಿಗಳ ಮೇಲೆ ಸಾಲ

ಸಾಲಗಳ ನೀಡಿಕೆ:- (**1**) **(2)**ನೇ ಉಪ ನಿಯಮದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಲೆಕ್ಕಹಾಕಲಾದ ಪಾಲಿಸಿಯ ಅಧ್ಯರ್ಪಿತ ಮೌಲ್ಯದ ಶೇಕಡಾ **90** ರಷ್ಟನ್ನು ಮೀರದ ಸಾಲವನ್ನು ನಿರ್ದೇಶಕರು, ಈ ಮುಂದಿನ ಉದ್ದೇಶಗಳಿಗಾಗಿ ವಿಮಾದಾರನಿಗೆ/ಳಿಗೆ ನೀಡಬಹುದು. ಎಂದರೆ:

(ಅ) ವಿಮಾದಾರನು/ಳು ಅಥವಾ ಅವನ/ಅವಳ ಕುಟುಂಬದ ಸದಸ್ಯನಾಗಿರುವ ಯಾವನೇ/ಳೇ ವ್ಯಕ್ತಿಯು ಪ್ರೌಢಶಾಲಾ ಹಂತಕ್ಕಿಂತ ಹೆಚ್ಚಿನ ಶಿಕ್ಷಣದ ವೆಚ್ಚವನ್ನು ಸಂದಾಯ ಮಾಡುವುದಕ್ಕಾಗಿ ಪರಂತು, ಅಂಥ ಶಿಕ್ಷಣವು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯದಾಗಿರತಕ್ಕುದು.

(ಆ) ವಿಮಾದಾರರ ಅಥವಾ ಅವನ/ಅವಳ ಕುಟುಂಬದ ಯಾವನೇ/ಳೇ ಸದಸ್ಯನ ದೀರ್ಘಕಾಲದ ಅಥವಾ ತೀವ್ರತರ ಕಾಯಿಲೆಗೆ ಸಂಬಂಧಿಸಿದಂತೆ ವಿಮಾದಾರರ ಖರ್ಚುಗಳನ್ನು ಸಂದಾಯ ಮಾಡುವುದಕ್ಕಾಗಿ;

(ಇ) ವಿಮಾದಾರರ ಅಥವಾ ಅವನ/ಅವಳ ಕುಟುಂಬದ ಸದಸ್ಯನಾಗಿರುವ ಯಾವನೇ/ಳೇ ವ್ಯಕ್ತಿಯ ಮದುವೆಗೆ ಸಂಬಂಧಿಸಿದ ವೆಚ್ಚಗಳನ್ನು ಸಂದಾಯ ಮಾಡುವುದಕ್ಕಾಗಿ;

(ಈ) ನಿವೇಶನದ ವೆಚ್ಚವೂ ಸೇರಿದಂತೆ ಮನೆಯ ನಿರ್ಮಾಣಕ್ಕಾಗಿ ಅಥವಾ ಸೂಕ್ತ ಮನೆಯನ್ನು ಕೊಳ್ಳುವುದಕ್ಕಾಗಿ ಮತ್ತು ಮನೆಯನ್ನು ವಿಸ್ತರಿಸುವ ಅಥವಾ ಮಾರ್ಪಾಟು ಮಾಡುವ ಮತ್ತು ಪುನರ್ ನಿರ್ಮಾಣದ ಉದ್ದೇಶಕ್ಕಾಗಿ;

(ಉ) ಅವನ/ಅವಳ ಕುಟುಂಬದ ಯಾವನೇ/ಳೇ ಸದಸ್ಯನ ಶವಸಂಸ್ಕಾರ ಅಥವಾ ಇತರ ಕರ್ಮಾಚರಣೆಗಳ ಸಂಬಂಧದಲ್ಲಿ ವಿಮಾದಾರರು ಮಾಡಬೇಕಾದ ರೂಢಿಗತ ಆಚರಣೆಯ ಕಡ್ಡಾಯ ವೆಚ್ಚಗಳನ್ನು ಸಂದಾಯ ಮಾಡುವುದಕ್ಕಾಗಿ;

ಕನಿಷ್ಟ ಪಕ್ಷ ಮೂರು ಪೂರ್ಣ ವರ್ಷಗಳಿಗೆ ಚಾಲ್ತಿಯಲ್ಲಿಲ್ಲದ ಪಾಲಿಸಿಗಳಿಗೆ ಸಂಬಂಧಿಸಿದಂತೆ ಈ ನಿಯಮದ ಮೇರೆಗೆ ಸಾಲವನ್ನು ಮಂಜೂರು ಮಾಡತಕ್ಕುದಲ್ಲ.

(ಅ) ಮನೆ ನಿರ್ಮಾಣ/ಮನೆ ಖರೀದಿ/ಮನೆ ದುರಸ್ತಿ ಮುಂಗಡ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಭದ್ರತೆಯಾಗಿ ಮತ್ತು ಅಥವಾ ಪಾಶ್ರ್ವಿಕ ಭದ್ರತೆಯಾಗಿ ಒತ್ತೆ ಇಡಲಾದ ಕರ್ನಾಟಕ ಸರ್ಕಾರದ ವಿಮಾ ಇಲಾಖೆಯ/ಹೈದರಾಬಾದ್ ರಾಜ್ಯ ಜೀವ ವಿಮಾ

ನಿಧಿಯ ಪಾಲಿಸಿಗಳನ್ನು, 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮಗಳ (ಆದೇಶ ಸಂಖ್ಯೆ ಎಫ್‌ಡಿ 259:ಪಿಎಲ್‌ಎಚ್ 74 ಬೆಂಗಳೂರು ದಿನಾಂಕ 24ನೇ ಮೇ 1975) 24 (ಎ)ನೇ ನಿಯಮದಲ್ಲಿ ವಿಧಿಸಲಾದ ಷರತ್ತುಗಳಿಗೆ ಒಳಪಟ್ಟು, ಕಟ್ಟಿದ / ಖರೀದಿ ಮಾಡಿದ / ದುರಸ್ತಿ ಮಾಡಿದ ಮನೆಯನ್ನು ಸರ್ಕಾರಕ್ಕೆ ಅಡಮಾನ ಮಾಡಿದ ಕೂಡಲೇ ಬಿಡುಗಡೆ ಮಾಡಬಹುದೆಂಬ ಪರಂತುಕಕ್ಕೆ ಒಳಪಟ್ಟು ವಿಮಾದಾರರಿಗೆ ನೀಡಿದ ಮನೆ ನಿರ್ಮಾಣ, ಮನೆ ಖರೀದಿ ಅಥವಾ ಮನೆ ದುರಸ್ತಿ ಮುಂಗಡದ ಮರು ಸಂದಾಯಕ್ಕಾಗಿ ಹೆಚ್ಚಿನ ಭದ್ರತೆಯಾಗಿ ಕೊಡಲಾದ ಪಾಲಿಸಿಯ ಸಂಬಂಧದಲ್ಲಿ ಈ ನಿಯಮದ ಮೇರೆಗೆ ಸಾಲವನ್ನು ನೀಡತಕ್ಕದಲ್ಲ.

(ಆ) ಎಲ್ಲ ಮುರಿತಗಳ ತರುವಾಯ (ಉದ್ದೇಶಿತ ಸಾಲ ಮಂಜೂರಾತಿಗೆ ಸಂಬಂಧಿಸಿದ ಮುರಿತಗಳನ್ನು ಒಳಗೊಂಡಂತೆ) ವಿಮಾದಾರನ/ಳ ಮಾಸಿಕ ನಿವ್ವಳ ವೇತನವು ಅವನ/ಅವಳ ಮಾಸಿಕ ಒಟ್ಟು ಉಪಲಬ್ಧಗಳ ಶೇಕಡಾ ಐವತ್ತಕ್ಕಿಂತ ಕಡಿಮೆಯಿರುವಲ್ಲಿ ಈ ನಿಯಮದ ಮೇರೆಗೆ ಯಾವುದೇ ಸಾಲವನ್ನು ಮಂಜೂರು ಮಾಡತಕ್ಕದಲ್ಲ.

**ವಿವರಣೆ:-** (**1**) ನೇ ಉಪ-ನಿಯಮದ ಉದ್ದೇಶಕ್ಕಾಗಿ-

(i) ಗಂಡ ಮತ್ತು ಹೆಂಡತಿ ಇವರಿಬ್ಬರೂ ಸರ್ಕಾರಿ ನೌಕರರಾಗಿದ್ದರೆ, "ನಿವ್ವಳ ವೇತನ" ಮತ್ತು "ಒಟ್ಟು ಉಪಲಬ್ದಗಳು", ಒಟ್ಟುಗೂಡಿಸಿದ ಅವರಿಬ್ಬರ ನಿವ್ವಳ ವೇತನ ಮತ್ತು ಒಟ್ಟು ಉಪಲಬ್ದಗಳಾಗಿರತಕ್ಕುದು ಮತ್ತು "ಮುರಿತಗಳು" ಅವರಿಬ್ಬರ ವೇತನದ ಒಟ್ಟು ಮುರಿತಗಳಾಗಿರತಕ್ಕುದು.

(ii) ಮನೆ ನಿರ್ಮಾಣ ಅಥವಾ ಮನೆ ಖರೀದಿ ಮುಂಗಡವನ್ನು ತೆಗೆದುಕೊಂಡ ವಿಮಾದಾರರ "ಒಟ್ಟು ಉಪಲಬ್ಧಗಳ" ಮನೆ ನಿರ್ಮಾಣ ಅಥವಾ ಮನೆ ಖರೀದಿ ಮುಂಗಡದ ಶೇಕಡಾ 7/12ಕ್ಕೆ ಸಮನಾದ ಮೊಬಲಗಿನ ಮೂಲಕ ಹೆಚ್ಚಿಸಲಾದ ಅವನ ಒಟ್ಟು ಉಪಲಬ್ಧಗಳಾಗಿರತಕ್ಕುದು.

(1) ಈ ನಿಯಮದ ಮೇರೆಗೆ ಸಾಲದ ಮಂಜೂರಾತಿಯ ಅರ್ಜಿಯನ್ನು ಈ ನಿಯಮಗಳಿಗೆ ಲಗತ್ತಿಸಲಾದ 'ಎ' ನಮೂನೆಯಲ್ಲಿ ಸಲ್ಲಿಸತಕ್ಕುದು.

(2) ಹಿಂದಿನ ಸಾಲವು ಪೂರ್ಣ ಪಾವತಿಯಾದ ನಂತರ ಅಥವಾ ಸಾಲ ಮಂಜೂರಾದ ದಿನಾಂಕದಿಂದ 40 ತಿಂಗಳುಗಳು ಯಾವುದು ತಡವಾಗಿ ಬರುವುದೋ ಅದು ಅಂತಹ

ವಿಮಾದಾರರು ಈ ಬಗ್ಗೆ ಯಾವಾಗ ಬೇಕಾದರೂ ಈ ಕೆಳಕಂಡ ಷರತ್ತುಗಳ ಮೇಲೆ ಮರು ಸಾಲಕ್ಕೆ ಅರ್ಜಿ ಸಲ್ಲಿಸಬಹುದು ಹಾಗೂ ಮಂಜೂರು ಮಾಡಬಹುದು.

(i) ಸಾಲದ ಮೇಲಿನ ಬಡ್ಡಿ ಮತ್ತು ವಿಮಾ ಕಂತು ಹಾಗೂ ಬಡ್ಡಿ ಇದ್ದಲ್ಲಿ ಮರು ಸಾಲದಲ್ಲಿ ಹೊಂದಾಣಿಕೆ ಮಾಡಿಕೊಂಡಲ್ಲಿ.

(ii) ತೆಗೆದುಹಾಕಲಾಗಿದೆ.

(iii) ವಿಮಾದಾರನು, ನಿರ್ದಿಷ್ಟ ಪಡಿಸಲಾದ ಸಂಖ್ಯೆಯ ಕಂತುಗಳಲ್ಲಿ ಅಥವಾ ಅವನು ನಿವೃತ್ತಿಯ ವಯಸ್ಸನ್ನು ತಲುಪುವ ಮೊದಲು ಇವೆರಡರಲ್ಲಿ ಯಾವುದು ಮೊದಲೋ ಅದರ ಪ್ರಕಾರ ಸಾಲವನ್ನು ಮತ್ತು ಅದರ ಮೇಲಿನ ಬಡ್ಡಿಯನ್ನು ಮರುಪಾವತಿ ಮಾಡಲುಸಮರ್ಥನಾಗಿದ್ದರೆ,

(ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 278, ಕೆಐಡಿ 88, ಬೆಂಗಳೂರು, ದಿನಾಂಕ 14.06.1989)

**ವಿವರಣೆ:-** ಈ ನಿಯಮದ ಉದ್ದೇಶಕ್ಕಾಗಿ "ಅವನ ಕುಟುಂಬದ ಒಬ್ಬ ಸದಸ್ಯ" ಎಂದರೆ ವಿಮಾದಾರನ/ಳ ಮೇಲೆ ವಾಸ್ತವವಾಗಿ ಅವಲಂಬಿತರಾಗಿರುವ ಗಂಡ, ಹೆಂಡತಿ, ಮಗ, ದತ್ತು ಮಗ, ಮಲ ಮಗ, ಮಗಳು ದತ್ತುಪುತ್ರಿ, ಮಲಮಗಳು, ತಂದೆ, ತಾಯಿ, ಮಲತಾಯಿ, ಸಹೋದರ, ಮಲ ಸಹೋದರ, ಸಹೋದರಿ ಅಥವಾ ಮಲ ಸಹೋದರಿ.

## ಬಡ್ಡಿ

ನಿಯಮದ ಮೇರೆಗೆ ಮಂಜೂರು ಮಾಡಲಾದ ಸಾಲದ ಮೇಲೆ, ವರ್ಷಕ್ಕೆ ಒಂಭತ್ತು ದರದಲ್ಲಿ ಸರಳ ಬಡ್ಡಿಯನ್ನು ವಿಧಿಸತಕ್ಕುದು.

## ಸಾಲಕ್ಕಾಗಿ ಭದ್ರತೆ

40ನೇ ನಿಯಮದ ಮೇರೆಗೆ ಮಂಜೂರು ಮಾಡಲಾದ ಸಾಲಕ್ಕೆ ಭದ್ರತೆಯಾಗಿ, ವಿಮಾದಾರರು ಕರ್ನಾಟಕ ರಾಜ್ಯಪಾಲರಿಗೆ ಪಾಲಿಸಿಯನ್ನು ಹಸ್ತಾಂತರಣ ಮಾಡತಕ್ಕುದು. ಪಾಲಿಸಿಯ ಹಸ್ತಾಂತರಣವು ಈ ನಿಯಮಗಳಿಗೆ ಲಗತ್ತಿಸಲಾದ 'ಬಿ' ನಮೂನೆಯಲ್ಲಿರತಕ್ಕುದು.

## ಸಾಲದ ವಸೂಲಿ

(1) 40ನೇ ನಿಯಮದ ಮೇರೆಗೆ ಮಂಜೂರು ಮಾಡಲಾದ ಸಾಲವನ್ನು, ಯಾವ ತಿಂಗಳಿನಲ್ಲಿ ಸಾಲವನ್ನು ಪಡೆಯಲಾಯಿತೋ ಅದರ ಮುಂದಿನ ತಿಂಗಳಿನಿಂದ ಪ್ರಾರಂಭಿಸಿ, ನಿರ್ದೇಶಕರು ನಿರ್ಧರಿಸಬಹುದಾದಂತೆ 48 ಸಮಾನ ಮಾಸಿಕ ಕಂತುಗಳನ್ನು ಮೀರದಂಥ ಸಂಖ್ಯೆಯಲ್ಲಿ ವೇತನದಿಂದ ಮುರಿದುಕೊಳ್ಳುವುದರ ಮೂಲಕ ವಸೂಲಿ ಮಾಡತಕ್ಕುದು. ಕಂತುಗಳನ್ನು ಪೂರ್ಣ ರೂಪಾಯಿಗಳಲ್ಲಿ ನಿಗದಿಪಡಿಸಲಾಗುವುದು. ಯಾವುದೇ ಸಂದರ್ಭದಲ್ಲಿ ವಸೂಲಿಯ ಅವಧಿಯನ್ನು ವಿಮಾದಾರನ/ಳ ನಿವೃತ್ತಿಯ ವಯಸ್ಸಿನ ನಂತರವೂ ವಿಸ್ತರಿಸತಕ್ಕದಲ್ಲ.

(2) ಸಾಲವನ್ನು ಪಡೆದ ವಿಮಾದಾರನು/ಳು ಯಾವುದೇ ಒಂದು ತಿಂಗಳಲ್ಲಿ ಒಂದಕ್ಕಿಂತ ಹೆಚ್ಚು ಕಂತನ್ನು ಮರುಪಾವತಿ ಮಾಡಬಹುದು.

(3) ಅಸಲು ಹಣದ ಮರು ಪಾವತಿಯು ಯಾವ ತಿಂಗಳಿನಲ್ಲಿ ಪೂರ್ಣಗೊಂಡಿತೋ ಅದರ ಮುಂದಿನ ತಿಂಗಳಿನಿಂದ ಪ್ರಾರಂಬಿಸಿ, ನಿರ್ದೇಶಕರು ನಿರ್ಧರಿಸಬಹುದಾದಂಥ ಒಂದು ಅಥವಾ ಹೆಚ್ಚು ಕಂತುಗಳಲ್ಲಿ ಸಾಲದ ಮೇಲೆ ಬಾಕಿಯಿರುವ ಬಡ್ಡಿಯನ್ನು ವಸೂಲಿಮಾಡತಕ್ಕದು. ಕಂತುಗಳಲ್ಲಿ ಅಂಥ ವಸೂಲಿಗಳನ್ನು ಮಾಡಲಾಗುವಲ್ಲಿ ಪ್ರತಿಯೊಂದು ಕಂತಿನ ಮೊಬಲಗು ಅಸಲು ಹಣಕ್ಕೆ ಸಂಬಂಧಿಸಿದ ಕಂತಿನ ಮೊಬಲಗಿಗಿಂತ ಹೆಚ್ಚಾಗಿರತಕ್ಕದ್ದಲ್ಲ.

(4) ವಿಮಾದಾರನು/ಳು ಭತ್ಯ ಸಹಿತವಾದ ರಜೆ ಪಡೆದು ಕೆಲಸದಿಂದ ಗೈರುಹಾಜರಾದಲ್ಲಿ ಅಥವಾ ಮುಂದಿನ ಸಂದಾಯಕ್ಕಾಗಿ ಅವನ ಸಂಬಳವನ್ನು ತಡೆಹಿಡಿಯಲಾದಲ್ಲಿ, ಸದರಿ ಕಂತನ್ನು ತರುವಾಯದಲ್ಲಿ ರಜೆ ಭತ್ಯ ಮತ್ತು ವೇತನವನ್ನು ಪಡೆದಾಗ ವಸೂಲಿ ಮಾಡತಕ್ಕುದು.

(5) ವಿಮಾದಾರರನ್ನು ಸೇವೆಯಿಂದ ಅಮಾನತ್ತುಗೊಳಿಸಲಾದ ಸಂದರ್ಭದಲ್ಲಿ ಅಥವಾ ಅವನು/ಅವಳು ಭತ್ಯರಹಿತ ರಜೆಯ ಮೇಲಿರುವ ಸಂದರ್ಭದಲ್ಲಿ ಮತ್ತು ಅವನ/ಳ ವೇತನದಿಂದ ಕಂತನ್ನು ಮುರಿದುಕೊಳ್ಳಲಾಗದ ಎಲ್ಲ ಇತರ ಸಂದರ್ಭಗಳಲ್ಲಿ, ಕಂತಿಗೆ ಸಂಬಂಧಿಸಿದಂತೆ ಬಾಕಿಯಿರುವ ಮೊಬಲಗನ್ನು ನಗದು ರೂಪದಲ್ಲಿ ಸಂದಾಯ ಮಾಡತಕ್ಕದು ಮತ್ತು ಹಾಗೆ ಸಂದಾಯ ಮಾಡದಿದ್ದಲ್ಲಿ, ಅರ್ಧ ವರ್ಷಕ್ಕೊಮ್ಮೆ ಲೆಕ್ಕಹಾಕಲಾಗುವ ವಾರ್ಷಿಕ ಶೇಕಡಾ ಒಂಭತ್ತು ದರದಲ್ಲಿ ಬಡ್ಡಿಯನ್ನು ವಿಧಿಸಲಾಗುವುದು ಮತ್ತು ಅದನ್ನು ಅವಳ/ಅವನ ಮುಂದಿನ ವೇತನದಿಂದ ವಸೂಲಿ ಮಾಡಲಾಗುವುದು.